# ನಮೂನೆ – 7

[13(2) ಮತ್ತು 26ನೇ ನಿಯಮಗಳನ್ನು ನೋಡಿ]

## ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಸುವುದರ ಬಗ್ಗೆ ಆಕ್ಷೇಪಿಸಿ ಅಥವಾ ಹೆಸರು ತೆಗೆದುಹಾಕುವಂತೆ ಕೋರಿ ಸಲ್ಲಿಸುವ ಅರ್ಜಿ

ಇವರಿಗೆ,

ಮತದಾರರ ನೋಂದಣಾಧಿಕಾರಿ,

.................................................................................. ವಿಧಾನಸಭಾ / ಲೋಕಸಭಾ £ ಕ್ಷೇತ್ರ

ಮಾನ್ಯರೇ,

@ ಮೇಲಿನ ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಕೆಳಗೆ ತಿಳಿಸಿರುವ ವ್ಯಕ್ತಿಯ ಹೆಸರನ್ನು ಸೇರಿಸಲು ಉದ್ದೇಶಿಸಿರುವುದರ ಕುರಿತು ನಾನು ಆಕ್ಷೇಪಿಸುತ್ತೇನೆ. ನನ್ನ ಈ ಆಕ್ಷೇಪಣೆಗೆ ಸಮರ್ಥನೆಯಾಗಿ ವಿವರಗಳನ್ನು ಕೆಳಗೆ ನೀಡಿರುತ್ತೇನೆ.

**ಅಥವಾ**

@ನನಗೆ/* ಕೆಳಗೆ ಹೆಸರಿಸಿರುವ ವ್ಯಕ್ತಿಗೆ ಸಂಬಂಧಪಟ್ಟ ನಮೂದನ್ನು ಈ ಕೆಳಗೆ ಹೇಳಿರುವ ಕಾರಣಗಳಿಂದಾಗಿ ತೆಗೆದುಹಾಕಬೇಕಾಗಿರುತ್ತದೆಯೆಂದು ನಾನು ನಿವೇದಿಸಿಕೊಳ್ಳುತ್ತೇನೆ.

| | | | |
|---|---|---|---|
| I. @ ಯಾವ ವ್ಯಕ್ತಿಯ ಹೆಸರನ್ನು ಸೇರಿಸುವುದಕ್ಕೆ ಆಕ್ಷೇಪಣೆ ವ್ಯಕ್ತಪಡಿಸಲಾಗಿದೆಯೋ ಆ ವ್ಯಕ್ತಿಯ ವಿವರಗಳು: | ಹೆಸರು: | | ಉಪನಾಮ (ಯಾವುದಾದರೂ ಇದ್ದರೆ): |
| @ ಯಾವ ವ್ಯಕ್ತಿಯ ನಮೂದನ್ನು ತೆಗೆದು ಹಾಕಬೇಕಾಗಿದೆಯೋ ಆ ವ್ಯಕ್ತಿಯ ವಿವರಗಳು: | ಆತನ/ಆಕೆಯ ಹೆಸರು ಸೇರ್ಪಡೆಯಾಗಿರುವಂಥ ಮತದಾರರ ಪಟ್ಟಿಯ ಭಾಗದ ಸಂಖ್ಯೆ: | ಆ ಭಾಗದಲ್ಲಿ ಆತನ/ಆಕೆಯ ಕ್ರಮ ಸಂಖ್ಯೆ: | ಮತದಾರರ ಭಾವಚಿತ್ರವಿರುವ ಗುರುತಿನ ಚೀಟಿಯ ಸಂಖ್ಯೆ (ನೀಡಲಾಗಿದ್ದರೆ): |

| | | | |
|---|---|---|---|
| II # | ಆಕ್ಷೇಪಿಸುವ ವ್ಯಕ್ತಿಯ ವಿವರಗಳು | ಹೆಸರು: | ಉಪನಾಮ (ಯಾವುದಾದರೂ ಇದ್ದರೆ): |
| | $ ಲಿಂಗ (ಪುರುಷ/ಮಹಿಳೆ) | ಆಕ್ಷೇಪಿಸುವ ವ್ಯಕ್ತಿಯ ಹೆಸರು ಸೇರ್ಪಡೆಯಾಗಿರುವ ಮತದಾರರ ಪಟ್ಟಿಯ ಭಾಗದ ಸಂಖ್ಯೆ | ಆ ಭಾಗದಲ್ಲಿ ಆತನ/ಆಕೆಯ ಕ್ರಮ ಸಂಖ್ಯೆ |
| *ತಂದೆಯ/ತಾಯಿಯ/ಗಂಡನ ಹೆಸರು | | ಹೆಸರು: | ಉಪನಾಮ (ಯಾವುದಾದರೂ ಇದ್ದರೆ): |

| | |
|---|---|
| **III.** | **@ ಆಕ್ಷೇಪಿಸುವ ವ್ಯಕ್ತಿಯ/@ ಹೆಸರು ತೆಗೆದುಹಾಕುವಂತೆ ಕೋರಿರುವ ವ್ಯಕ್ತಿಯ ಸಾಮಾನ್ಯ ನಿವಾಸ ಸ್ಥಳದ ವಿವರಗಳು (ಪೂರ್ಣ ವಿಳಾಸ)** |
| ಮನೆ / ಬಾಗಿಲ ಸಂಖ್ಯೆ: | |
| ಬೀದಿ / ಪ್ರದೇಶ / ಸ್ಥಳ / ಮೊಹಲ್ಲಾ / ರಸ್ತೆ: | |
| ಪಟ್ಟಣ / ಗ್ರಾಮ: | |
| ಅಂಚೆ ಕಚೇರಿ: | ಪಿನ್ ಕೋಡ್ |
| ತಹಸಿಲ್ / ತಾಲ್ಲೂಕು / ಮಂಡಲ / ಠಾಣಾ: | |
| ಜಿಲ್ಲೆ: | |

**IV. *ಆಕ್ಷೇಪಣೆಗೆ/*ತೆಗೆದು ಹಾಕುವುದಕ್ಕೆ ಕಾರಣ(ಗಳು)**

£ ವಿಧಾನ ಸಭೆ ಇಲ್ಲದಿರುವ ಕೇಂದ್ರಾಡಳಿತ ಪ್ರದೇಶಗಳು ಮತ್ತು ಜಮ್ಮು ಮತ್ತು ಕಾಶ್ಮೀರ ರಾಜ್ಯದ ವಿಷಯದಲ್ಲಿ.

@ ಈ ಮೊದಲನೇ ಪರ್ಯಾಯ ಪದವು ಮತದಾರರ ಪಟ್ಟಿಯನ್ನು ಸಿದ್ಧಪಡಿಸುವಾಗ/ಪರಿಷ್ಕರಿಸುವಾಗ ಅನ್ವಯಿಸುತ್ತದೆ. ಎರಡನೇ ಪರ್ಯಾಯ ಪದವು, ಮತದಾರರ ಪಟ್ಟಿ ಅಂತಿಮವಾಗಿ ಪ್ರಕಟವಾದ ತರುವಾಯ ಅದನ್ನು ನಿರಂತರವಾಗಿ ತಹಲ್‌ವರೆಗೆ ಪರಿಷ್ಕರಿಸುವ ಅವಧಿಯಲ್ಲಿ ಅನ್ವಯಿಸುತ್ತದೆ.

* ಸಮುಚಿತವಲ್ಲದ ಪರ್ಯಾಯ ಪದವನ್ನು ಹೊಡೆದುಹಾಕಿ.

# ಅರ್ಜಿದಾರನು ತನಗೆ ಸಂಬಂಧಪಟ್ಟ ನಮೂದನ್ನು ತೆಗೆದು ಹಾಕಬೇಕೆಂದು ಕೋರುವಾಗ ಭಾಗ-IIನ್ನು ಭರ್ತಿ ಮಾಡಬಾರದು.

$ ಗಂಡಸು ಅಥವಾ ಹೆಂಗಸು ಎಂದು ತಿಳಿಸಲು ಇಚ್ಛಿಸದ ಅರ್ಜಿದಾರರು ಅವರ ಲಿಂಗವನ್ನು 'ಇತರೆ' ಎಂದು ನಮೂದಿಸಬಹುದು.

**V. ಘೋಷಣೆ**

ಮೇಲೆ ತಿಳಿಸಿರುವ ಸಂಗತಿಗಳು ಮತ್ತು ನನಗೆ ತಿಳಿದ ಮಟ್ಟಿಗೆ ಮತ್ತು ನಾನು ನಂಬಿರುವ ಮಟ್ಟಿಗೆ ಸತ್ಯವಾಗಿವೆಯೆಂದು ನಾನು ಈ ಮೂಲಕ ಘೋಷಿಸುತ್ತೇನೆ.

ಸ್ಥಳ :

ದಿನಾಂಕ: ಅರ್ಜಿದಾರನ ಸಹಿ ಅಥವಾ ಹೆಬ್ಬೆಟ್ಟಿನ ಗುರುತು.

**ಸೂಚನೆ:** ಸುಳ್ಳು ಮತ್ತು ಸುಳ್ಳೆಂದು ಆತನಿಗೆ ತಿಳಿದಿರುವಂಥ ಅಥವಾ ಆತ ನಂಬಿರುವಂಥ ಅಥವಾ ನಿಜವೆಂದು ನಂಬಲು ಸಾಧ್ಯವಿಲ್ಲದಂಥ ಹೇಳಿಕೆ ನೀಡುವಂಥ ಅಥವಾ ಘೋಷಣೆ ಮಾಡುವಂಥ ಯಾರೇ ವ್ಯಕ್ತಿಯು, ಜನತಾ ಪ್ರಾತಿನಿಧ್ಯ ಅಧಿನಿಯಮ, 1950ರ (1950ರ 43) ಪ್ರಕರಣ 31ರ ಮೇರೆಗೆ ದಂಡನೆಗೆ ಗುರಿಯಾಗುತ್ತಾನೆ.

* ಸಮುಚಿತವಲ್ಲದ ಪರ್ಯಾಯ ಪದ ಪ್ರಕಾರವನ್ನು ಹೊಡೆದು ಹಾಕಿ.

**ತೆಗೆದುಕೊಂಡ ಕ್ರಮದ ವಿವರಗಳು**
**(ಚುನಾವಣಾ ಕ್ಷೇತ್ರದ ಮತದಾರರ ನೋಂದಣಾಧಿಕಾರಿಯವರು ಭರ್ತಿ ಮಾಡಬೇಕು)**

ಮತದಾರರ ಪಟ್ಟಿಯಲ್ಲಿ ಶ್ರೀ / ಶ್ರೀಮತಿ / ಕುಮಾರಿ .................................................................................. ಇವರ ಹೆಸರನ್ನು

ಸೇರಿಸುವುದಕ್ಕೆ ಆಕ್ಷೇಪಿಸಿ*/ತೆಗೆದುಹಾಕುವಂತೆ ಕೋರಿ *ಶ್ರೀ / ಶ್ರೀಮತಿ / ಕುಮಾರಿ ................................................

ಇವರು ನಮೂನೆ 7ರಲ್ಲಿ ಸಲ್ಲಿಸಿರುವ ಅರ್ಜಿಯನ್ನು ಅಂಗೀಕರಿಸಲಾಗಿದೆ* / ತಿರಸ್ಕರಿಸಲಾಗಿದೆ*.

*ಅಂಗೀಕರಿಸಿರುವುದಕ್ಕೆ [ನಿಯಮ 18*/20*/26*(4)£ರ ಅಡಿಯಲ್ಲಿ ಅಥವಾ ಅನುಸಾರವಾಗಿ] ಅಥವಾ *ತಿರಸ್ಕರಿಸುವುದಕ್ಕೆ [ನಿಯಮ 17*/20*/26(4)£ರ ಅಡಿಯಲ್ಲಿ ಅಥವಾ ಅನುಸಾರವಾಗಿ] ಸಂಬಂಧಿಸಿದ ವಿವರವಾದ ಕಾರಣಗಳು.

ಸ್ಥಳ: ಮತದಾರರ ನೋಂದಣಾಧಿಕಾರಿಯವರ ಸಹಿ — ಮತದಾರರ ನೋಂದಣಾಧಿಕಾರಿಯವರ ಮೊಹರು

ದಿನಾಂಕ:

* ಸಮುಚಿತವಲ್ಲದ ಪರ್ಯಾಯ ಪದವನ್ನು ಹೊಡೆದುಹಾಕಿ.

£ ಮತದಾರರ ಪಟ್ಟಿ ಅಂತಿಮವಾಗಿ ಪ್ರಕಟವಾದ ನಂತರ ಅದನ್ನು ನಿರಂತರವಾಗಿ ತಪಸೀಲವಾರು ಪರಿಷ್ಕರಿಸುವ ಅವಧಿಯಲ್ಲಿ.

---

**ಕ್ಷೇತ್ರ ಮಟ್ಟದ ಅಧಿಕಾರಿಗಳ ಷರಾ (ಉದಾ: ಮತಗಟ್ಟೆ ಮಟ್ಟದ ಅಧಿಕಾರಿ, ನಿಯೋಜಿತ ಅಧಿಕಾರಿ, ಮೇಲ್ವಿಚಾರಣೆ ಅಧಿಕಾರಿ)**

## ಅರ್ಜಿಯ ಸ್ವೀಕೃತಿ

** ಶ್ರೀ / ಶ್ರೀಮತಿ / ಕುಮಾರಿ .............................................................................................................

**ವಿಳಾಸ .............................................................................................................................

............................................................................................. ಇವರು ನಮೂನೆ 7ರಲ್ಲಿ ಸಲ್ಲಿಸಿರುವ ಅರ್ಜಿಯನ್ನು ಸ್ವೀಕರಿಸಲಾಗಿದೆ.

ದಿನಾಂಕ: ......................

ಮತದಾರರ ನೋಂದಣಾಧಿಕಾರಿಯವರ ಪರವಾಗಿ

ಅರ್ಜಿ ಸ್ವೀಕರಿಸುವ ಅಧಿಕಾರಿಯ ಸಹಿ

(ವಿಳಾಸ):.............................................................................................

.............................................................................................

** ಅರ್ಜಿದಾರರೇ ತುಂಬಬೇಕು.

---

## ಅರ್ಜಿ ನಮೂನೆ – 7ನ್ನು ಭರ್ತಿ ಮಾಡಲು ಮಾರ್ಗದರ್ಶನ

### ಸಾಮಾನ್ಯ ಸೂಚನೆಗಳು

**ನಮೂನೆ –7 ನ್ನು ಯಾರು ಸಲ್ಲಿಸಬಹುದು**

ಮತದಾರರ ಪಟ್ಟಿಯ ಆ ಭಾಗದಲ್ಲಿ ಸೇರಿಸಲು ಪ್ರಸ್ತಾವಿತವಾಗಿರುವ ಹೆಸರಿನ ಸೇರ್ಪಡೆಗೆ ಆಕ್ಷೇಪಿಸುವ ದೃಷ್ಟಿಯಿಂದ ಅಥವಾ ಮತದಾರ ಪಟ್ಟಿಯ ಆ ಭಾಗದಲ್ಲಿ ಈಗಾಗಲೇ ಸೇರಿಸಿರುವ ಹೆಸರನ್ನು ತೆಗೆದುಹಾಕಲು ಕೋರಿ ಆ ಪಟ್ಟಿಯಲ್ಲಿ ಈಗಾಗಲೇ ತನ್ನ ಹೆಸರು ಇರುವ ವ್ಯಕ್ತಿಯು ಮಾತ್ರ ಸಲ್ಲಿಸಬಹುದಾಗಿದೆ.

**ನಮೂನೆ –7 ನ್ನು ಯಾವಾಗ ಸಲ್ಲಿಸಬಹುದು**

1) ಕರಡು ಪಟ್ಟಿಯಲ್ಲಿ ನಮೂದಿನ ಪ್ರಸ್ತಾವಿತ ಸೇರ್ಪಡೆಗೆ ಆಕ್ಷೇಪಿಸಲು, ಕ್ಷೇತ್ರದ ಮತದಾರ ಪಟ್ಟಿಯ ಕರಡನ್ನು ಪ್ರಕಟಿಸಿದ ನಂತರ ಅರ್ಜಿಯನ್ನು ಸಲ್ಲಿಸಬಹುದು. ಆ ಉದ್ದೇಶಕ್ಕಾಗಿ ಗೊತ್ತುಪಡಿಸಲಾದ ನಿರ್ದಿಷ್ಟ ದಿನಗಳೊಳಗಾಗಿ ಅರ್ಜಿಯನ್ನು ಸಲ್ಲಿಸಬೇಕು. ಪರಿಷ್ಕರಣಾ ಕಾರ್ಯಕ್ರಮವನ್ನು ಪ್ರಕಟಿಸಿದಾಗ ಮೇಲಿನ ಅವಧಿಯ ಬಗ್ಗೆ ವ್ಯಾಪಕ ಪ್ರಚಾರ ನೀಡಲಾಗುತ್ತದೆ.

2) ಅರ್ಜಿಯ ಒಂದೇ ಒಂದು ಪ್ರತಿಯನ್ನು ಸಲ್ಲಿಸಬೇಕು.

3) ಪರಿಷ್ಕರಣಾ ಕಾರ್ಯಕ್ರಮ ನಡೆಯುತ್ತಾ ಇಲ್ಲದಿರುವಾಗ ಕೂಡಾ, ಅಂತಿಮ ಮತದಾರ ಪಟ್ಟಿಯಿಂದ ನಮೂನೆಯನ್ನು ತೆಗೆದು ಹಾಕಲು ಕೋರಿ ಅರ್ಜಿಯನ್ನು ವರ್ಷ ಪೂರ್ತಿ ಸಲ್ಲಿಸಬಹುದಾಗಿದೆ. ಪರಿಷ್ಕರಣೆ ಮಾಡದಿರುವ ಅವಧಿಯಲ್ಲಿ ಅರ್ಜಿಯನ್ನು ದ್ವಿಪ್ರತಿಯಲ್ಲಿ ಸಲ್ಲಿಸಬೇಕು.

**ನಮೂನೆ – 7 ನ್ನು ಎಲ್ಲಿ ಸಲ್ಲಿಸಬೇಕು**

1) ಮತದಾರರ ಪಟ್ಟಿ ಪರಿಷ್ಕರಣೆಯ ಅವಧಿಯಲ್ಲಿ, ಕರಡು ಮತದಾರರ ಪಟ್ಟಿ ಪ್ರಕಟಿಸಿರುವ ಸ್ಥಳದಲ್ಲಿ [ಸಾಮಾನ್ಯವಾಗಿ ಮತದಾನ ಕೇಂದ್ರದ ಸ್ಥಳಗಳಲ್ಲಿ] ಅಲ್ಲದೇ ಆಯಾ ಮತಕ್ಷೇತ್ರದ ಮತದಾರರ ನೋಂದಣಿ ಅಧಿಕಾರಿ ಮತ್ತು ಸಹಾಯಕ ಮತದಾರರ ನೋಂದಣಿ ಅಧಿಕಾರಿಯವರಿಗೆ ಸಲ್ಲಿಸಬೇಕು.

2) ಮತದಾರರ ಪಟ್ಟಿ ಪರಿಷ್ಕರಣೆಯ ಕಾರ್ಯಕ್ರಮ ಇಲ್ಲದ ಅವಧಿಯಲ್ಲಿ ಅರ್ಜಿಯನ್ನು ಕೇವಲ ಮತದಾರರ ನೋಂದಣಿ ಅಧಿಕಾರಿಯವರಲ್ಲಿ ಮಾತ್ರ ಸಲ್ಲಿಸಬೇಕು.

## ನಮೂನೆ – 7 ನ್ನು ಭರ್ತಿ ಮಾಡುವುದು ಹೇಗೆ

1) **ಅರ್ಜಿಯನ್ನು ಯಾವ ವಿಳಾಸಕ್ಕೆ ಸಲ್ಲಿಸಬೇಕು.**

ಮತದಾರರ ಕರಡು ಪಟ್ಟಿಯಲ್ಲಿ ಪ್ರಸ್ತಾವಿತ ಸೇರ್ಪಡೆಗೆ ಆಕ್ಷೇಪಿಸುವ ನಮೂದನ್ನು ಆ ಪಟ್ಟಿಯಲ್ಲಿ ನೊಂದಾಯಿಸಲ್ಪಟ್ಟಿರುವ ಇನ್ನೊಬ್ಬ ಮತದಾರರನು, ಕ್ಷೇತ್ರದ ಮತ ನೋಂದಣಾಧಿಕಾರಿಯವರಿಗೆ ಸಲ್ಲಿಸಬೇಕು ಹಾಗೂ ಕ್ಷೇತ್ರದ ಹೆಸರನ್ನು ಖಾಲಿ ಜಾಗದಲ್ಲಿ ನಮೂದಿಸತಕ್ಕದ್ದು.

2) **ಯಾವ ವ್ಯಕ್ತಿಯ ಹೆಸರಿನ ಸೇರ್ಪಡೆಗೆ ಆಕ್ಷೇಪಿಸಲಾಗಿದೆಯೋ ಅವರ ವಿವರ/ಯಾವ ವ್ಯಕ್ತಿಯ ಹೆಸರನ್ನು ತೆಗೆದು ಹಾಕಬೇಕಾಗಿದೆಯೋ ಅವರ ವಿವರ**

ಎರಡು ಬದಲಿ ಐಚ್ಛಿಕಗಳಲ್ಲಿ, ಮತದಾರರ ಪಟ್ಟಿಯ ಪರಿಷ್ಕರಣೆಯ ಅವಧಿಯಲ್ಲಿ ಮತದಾರರ ಪಟ್ಟಿಯ ಕರಡು ಪ್ರಕಟಣೆಯ ನಂತರ ಮೊದಲನೆ ಬದಲಿ ಸುಸಂಗತವಾಗಿರುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ ಮತದಾರರ ಪಟ್ಟಿಯ ಅಂತಿಮ ಪ್ರಕಟಣೆಯ ಸಮಯದಲ್ಲಿ, ತೆಗೆದುಹಾಕುವಿಕೆಗಳ ಪಟ್ಟಿಯಲ್ಲಿ, ಕರಡು ಮತದಾರರ ಪಟ್ಟಿಯಲ್ಲಿ ಆಕ್ಷೇಪಿತ ನಮೂದನ್ನು ತೋರಿಸುವುದು. ಮತದಾರರ ಪಟ್ಟಿಯ ಅಂತಿಮ ಪ್ರಕಟಣೆಯ ನಂತರ ನಿರಂತರವಾಗಿ ಇಲ್ಲಿಯವರೆಗೆ ಸಿದ್ಧಪಡಿಸುವ ಅವಧಿಯಲ್ಲಿ ಎರಡನೆಯ ಬದಲಿ ಸುಸಂಗತವಾಗಿರುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ ಅಂತಿಮ ಮತದಾರರ ಪಟ್ಟಿಯಲ್ಲಿ ಈಗಾಗಲೇ ಸೇರಿಸಲಾದ ನಮೂದನ್ನು ತೆಗೆದುಹಾಕುವುದು.

(ನಮೂನೆಯನ್ನು ಭರ್ತಿ ಮಾಡುವಾಗ ಸೂಕ್ತವಲ್ಲದ ಬದಲಿಯನ್ನು ದಯವಿಟ್ಟು ಹೊಡೆದು ಹಾಕಿ)

ಸೇರ್ಪಡೆಗೆ ಯಾವ ವ್ಯಕ್ತಿಯ ನಮೂದನ್ನು ಆಕ್ಷೇಪಿಸಲಾಗಿದೆಯೋ ಅಥವಾ ತೆಗೆದು ಹಾಕಲು ಕೋರಲಾಗಿದೆಯೋ ಆ ವ್ಯಕ್ತಿಯ ಹೆಸರಿನ ಜೊತೆಗೆ ಮತದಾರರ ಪಟ್ಟಿ ಭಾಗದ ಸಂಖ್ಯೆ, ಆ ಮತದಾರರ ಪಟ್ಟಿಯ ಆ ಭಾಗದಲ್ಲಿನ ನಮೂದಿನ ಕ್ರಮ ಸಂಖ್ಯೆ ಹಾಗೂ ಆ ವ್ಯಕ್ತಿಗೆ ನೀಡಲಾಗಿರುವ ಗುರುತಿನಚೀಟಿ ಸಂಖ್ಯೆ, ಇತ್ಯಾದಿ ವಿವರಗಳನ್ನು ಸಹಾ ಭರ್ತಿ ಮಾಡಬೇಕಾಗುತ್ತದೆ. ಈ ವಿವರಗಳು ಮತದಾರರ ಪಟ್ಟಿಯ ಸುಸಂಗತ ಭಾಗದಲ್ಲಿ ಲಭ್ಯವಿರುತ್ತವೆ. ಮತದಾರ ಪಟ್ಟಿಯ ಭಾಗ ಸಂಖ್ಯೆಯನ್ನು ಮತದಾರ ಪಟ್ಟಿಯ ಬಲಭಾಗದ ಮೇಲ್ತುದಿಯಲ್ಲಿ ಮುದ್ರಿಸಲಾಗಿರುತ್ತದೆ. ಪ್ರತಿ ನಮೂದಿಗೆ ಕ್ರಮ ಸಂಖ್ಯೆ ನೀಡಲಾಗಿರುತ್ತದೆ. ಯಾವ ವ್ಯಕ್ತಿಯ ಹೆಸರಿನ ಸೇರುವಿಕೆಗೆ ಆಕ್ಷೇಪಿಸಲಾಗಿದೆಯೋ/ತೆಗೆದುಹಾಕಲು ಕೋರಲಾಗಿದೆಯೋ ಆ ಹೆಸರು ನಮೂದಾಗಿರುವ ಕ್ರಮ ಸಂಖ್ಯೆಯನ್ನು ಮತದಾರ ಪಟ್ಟಿಯಿಂದ ನೋಡಿ ಬರೆಯಬೇಕು. ಆ ವ್ಯಕ್ತಿಗೆ ಈಗಾಗಲೇ ಗುರುತಿನಚೀಟಿಯನ್ನು ನೀಡಲಾಗಿದ್ದರೆ, ಆ ನಂಬರನ್ನು ಸಹ ನಮೂದಿನ ಎದುರಿಗೆ ಮುದ್ರಿಸಲಾಗಿರುತ್ತದೆ. ನೀಡಲಾಗಿರುವ ಜಾಗದಲ್ಲಿ ಆ ಚೀಟಿಯ ಸಂಖ್ಯೆಯನ್ನು ದಯವಿಟ್ಟು ಪೂರ್ತಿಯಾಗಿ ಬರೆಯಿರಿ.

ಪ್ರತಿಯೊಂದು ನಮೂದಿನ ಸೇರ್ಪಡೆಗೆ ಆಕ್ಷೇಪಿಸಲು/ ತೆಗೆದುಹಾಕಲು ಕೋರಲು ಪ್ರತ್ಯೇಕ ಅರ್ಜಿಯನ್ನು ಭರ್ತಿ ಮಾಡಬೇಕಾಗುತ್ತದೆ.

3) **ಆಕ್ಷೇಪಣೆಕಾರರ ವಿವರಗಳು :**

ಆತ/ ಆಕೆ ನೋಂದಾಯಿಸಿರುವ ಮತದಾರರ ಪಟ್ಟಿಯ ಭಾಗದಲ್ಲಿ ಸೇರಿಸಿರುವ ವ್ಯಕ್ತಿಗಳ ಸಂಬಂಧದಲ್ಲಿ ಮಾತ್ರ 'ಆಕ್ಷೇಪಿಸುವವರು' ನಮೂನೆ –7 ರಲ್ಲಿ ಅರ್ಜಿ ಸಲ್ಲಿಸಬಹುದು. ಅರ್ಜಿಯ ಭಾಗ–II ರಲ್ಲಿ ಆಕ್ಷೇಪಿತರು ನೀಡಿರುವ ಜಾಗದಲ್ಲಿ ಉಪನಾಮ ಸೇರಿದಂತೆ ಆತನ/ ಆಕೆಯ ಹೆಸರು, ಸಂಬಂಧಿಯ ಹೆಸರು (ತಂದೆ/ತಾಯಿ/ಪತಿ), ಲಿಂಗ, ಮತದಾರರ ಪಟ್ಟಿಯ ಭಾಗ ಸಂಖ್ಯೆ ಹಾಗೂ ಮತದಾರರ ಪಟ್ಟಿಯ ಆ ಭಾಗದಲ್ಲಿ ಆತನ/ಆಕೆಯ ಹೆಸರು ಎಷ್ಟನೇ ಕ್ರಮ ಸಂಖ್ಯೆಯಲ್ಲಿದೆ ಎಂಬುದನ್ನು ಭರ್ತಿ ಮಾಡಬೇಕು.

ಅರ್ಜಿಯ ಭಾಗ–III ರಲ್ಲಿ ನೀಡಿರುವ ಜಾಗದಲ್ಲಿ ಆಕ್ಷೇಪಣೆಕಾರರು ಪೂರ್ಣ ವಿಳಾಸವನ್ನು ಭರ್ತಿ ಮಾಡಬೇಕು.

4) **ಆಕ್ಷೇಪಿಸಲು/ ತೆಗೆದುಹಾಕಲು ಕಾರಣಗಳು :**

ಅರ್ಜಿಯ ಭಾಗ–IV ರಲ್ಲಿ 'ಆಕ್ಷೇಪಣೆಕಾರರು' ತಮ್ಮ ಪ್ರಕಾರ ಯಾವ ಹೆಸರನ್ನು ಆಕ್ಷೇಪಿಸಲಾಗಿದೆಯೋ ಅವರು ಯಾವ ಕಾರಣಕ್ಕಾಗಿ ಮತದಾರರ ಪಟ್ಟಿಯ ಆ ಭಾಗದಲ್ಲಿ ಸೇರ್ಪಡೆಗೆ ಅರ್ಹರಿಲ್ಲ ಎಂಬ ಕಾರಣಗಳನ್ನು ನಿರ್ದಿಷ್ಟಪಡಿಸಬೇಕು ಅದೆಂದರೆ ಮರಣದ ಕಾರಣದಿಂದ, ಸ್ಥಳಾಂತರ ಹೊಂದಿರುವುದರಿಂದ, ನೋಂದಾಯಿತ ವಿಳಾಸದಲ್ಲಿ ಸಾಮಾನ್ಯವಾಗಿ ವಾಸಿಸುತ್ತಿಲ್ಲವೆಂಬ ಕಾರಣಕ್ಕೆ, ಇತ್ಯಾದಿ. ಹೆಸರನ್ನು ತೆಗೆದುಹಾಕಲು ಕಾರಣವನ್ನು ಪುಷ್ಟೀಕರಿಸಲು ರುಜುವಾತು ಹಾಜರುಪಡಿಸುವುದು ಆಕ್ಷೇಪಣೆಕಾರರ ಜವಾಬ್ದಾರಿಯಾಗಿರುತ್ತದೆ.

5) **ಘೋಷಣೆ:**

ಅರ್ಜಿಯ ಭಾಗ–V ರಲ್ಲಿ ಅರ್ಜಿದಾರರು, ಅರ್ಜಿಯಲ್ಲಿ ನಮೂದಿಸಿರುವ ಅಂಶಗಳು ಹಾಗೂ ವಿವರಗಳು ಅವರ ತಿಳುವಳಿಕೆಯ ಹಾಗೂ ನಂಬಿಕೆಯ ಮಟ್ಟಿಗೆ ನಿಜವಾದವುಗಳೆಂದು ಒಂದು ಘೋಷಣೆಯನ್ನು ನೀಡಬೇಕು, ನೀಡಿರುವ ವಿಳಾಸದಲ್ಲಿ ನೀವು ಯಾವ ದಿನಾಂಕದಿಂದ ವಾಸಿಸುತ್ತಿದ್ದೇವೆಂಬುದನ್ನು ದಯವಿಟ್ಟು ಸೂಚಿಸಿರಿ. ಸುಳ್ಳು ಘೋಷಣೆಯನ್ನು ನೀಡುವುದು ಪ್ರಜಾ ಪ್ರಾತಿನಿಧ್ಯ ಅಧಿನಿಯಮ 1950 ರ ಪ್ರಕರಣ 31 ರ ಅಡಿಯಲ್ಲಿ ಶಿಕ್ಷಾರ್ಹವಾಗುತ್ತದೆ.